## ಆ ರಸ್ತೆಯನ್ನೇ ಬಿಟ್ಟೆ

ನಮ್ಮೆಲ್ಲರ ಪ್ರೀತಿಯ ಪಕ್ಕು ಒಂದು ದಿನ ಬೆಳಗಿನ ವಾಯುವಿಹಾರದ ಬಗ್ಗೆ ಮನಮುಟ್ಟುವಂತೆ ವಿವರಿಸಿದ. ನಾನೂ ಈ ವಿಷಯವನ್ನು ಗಂಭೀರವಾಗಿಯೆ ತೆಗೆದುಕೊಂಡೆ. ಕಾಡಿನಿಂದ ಆವೃತ್ತವಾದ ಮಾಗೋಡು ಜಲಪಾತಕ್ಕೆ ಹೋಗುವ ರಸ್ತೆಯನ್ನೇ ವಾಯುವಿಹಾರಕ್ಕೆ ಆಯ್ದುಕೊಂಡೆ. ಒಂದು ಶುಭ ಮುಂಜಾನೆ ಕಾರನ್ನು ರಸ್ತೆಯ ಪಕ್ಕಕ್ಕೆ ನಿಲ್ಲಿಸಿ ವಾಯುವಿಹಾರ ಆರಂಭಿಸಿದೆ.

ಆದರೆ ದಿನಕಳೆದಂತೆ ಶುರುವಾದ್ದೇ ಬೇರೆ! 'ಸಿರಿಯಸ್ಸಾಗಿ ವಾಕಿಂಗ್ ಮಾಡ್ತಾ ಇದಿರಿ, ಆರಾಮ ಇಲ್ವಾ', 'ನಿಮ್ಮನ್ನು ನೋಡಿದ್ರೆ ಗೊತ್ತಾಗ್ತದೆ, ಆರಾಮ ಇಲ್ಲಾ ಅಂತಾ', 'ಹೆಲ್ತ್ ಪ್ರಾಬ್ಲಮ್ಮಾ?', 'ಒಳ್ಳೆ ವೈದ್ಯರಿಗೆ ತೋರ್ಸಿ', 'ನನಗೆ ಮಂಗ್ಳೂರಲ್ಲಿ ಒಳ್ಳೆ ಡಾಕ್ಟರ್ ಪರಿಚಯ ಇದೆ. ಬೇಕಾದ್ರೆ ಹೋಗಿ ಬರೋಣ'... ಹೀಗೆ ಹತ್ತಾರು ಜನ ಹತ್ತಾರು ರೀತಿಯಲ್ಲಿ ಹೇಳಿ ಹೇಳಿ ಸುಸ್ತು ಮಾಡಿದರು. ಹೀಗೇ ಮುಂದುವರೆದರೆ ನನಗೆ ದೊಡ್ಡ ರೋಗ ಬರಬಹುದೆಂದು ಹೆದರಿ ಮಾರನೇ ದಿನ ಆ ರಸ್ತೆಯನ್ನೇ ಬಿಟ್ಟೆ...

**ಬೀರಣ್ಣ ನಾಯಕ ಮೊಗಟಾ**





## ಹಾರಾಕತ್ತಾಳ...

ನಮ್ಮ ಗೆಳತಿಯರ ಗುಂಪಿನಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳ ಗೆಳತಿಯರೂ ಇದ್ದೇವೆ. ಹಾಗಾಗಿ ಕೆಲವೊಮ್ಮೆ ಒಂದೊಂದು ಕಡೆಯ ಭಾಷೆ ನಗೆಗಡಲಲ್ಲಿ ತೇಲಿಸುತ್ತಿರುತ್ತದೆ.

ಮೊನ್ನೆ ಹೀಗೇ ಆಯಿತು. ಗೆಳತಿಯರೆಲ್ಲಾ ಸೇರಿ ಹೋಟೆಲ್‌ಗೆ ಊಟಕ್ಕೆ ಹೋಗಿದ್ದೆವು. ಊಟ ಆರ್ಡರ್ ಮಾಡಿ ಸೆಲ್ಫೀ ತೆಗೆದುಕೊಳ್ಳೋಣಾ ಅಂತಾ ಎಲ್ಲರಿಗಿಂತ ಮುಂದಿರುವ ಗೆಳತಿ ಲೀಲಾ ಮೊಬೈಲು ಹಿಡಿದಳು. ಹಿಂದೆ ನಿಂತಿದ್ದ ವೀಣಾ, 'ಅಯ್ಯೋ ತಡೀಯ ಲೀಲಾ, ನಳಿನಿ ಹಾರಕತ್ತಾಳ ನೋಡು' ಎಂದಳು. ನಾನೆಲ್ಲಿ ಹಾರುತ್ತಿದ್ದೇನೆಂದು ಎಲ್ರೂ ನನ್ನ ಕಡೆ ನೋಡಿದರು. ತಟ್ಟನೆ ನಾಲಿಗೆ ಕಚ್ಚಿಕೊಂಡ ವೀಣಾ, 'ಫೋಟೊದಲ್ಲಿ ನಳಿನಿ ಕವರ್ ಆಗ್ತಾ ಇಲ್ಲ... ಅದಕ್ಕ ನಮ್ಮ ಭಾಷಾದಾಗ ಹಂಗ ಅನ್ತಾರ' ಎನ್ನುತ್ತಿದ್ದಂತೆ ಎಲ್ಲರೂ ನಗಲು ಶುರುಮಾಡಿದೆವು.

**ನಳಿನಿ ಟಿ. ಭೀಮಪ್ಪ**